ಶ್ರೀ ಸಿ ಜೆ. ಮುಕ್ಕಣ್ಣಪ್ಪ.—ನಮ್ಮ ರಾಜ್ಯದಲ್ಲಿ ಈ ಎಂಪ್ಲಾಯ್‌ಮೆಂಟ್ ಪೊರ್ಟಫಿಯಾಲಟಿ ಯನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿತ್ತು. ಆದ್ದರಿಂದ ಅಧ್ಯಕ್ಷರೇ ಈ ಪ್ರಶ್ನೆಯನ್ನು ಹಾಕಿದರೂ ಹಾಕಬಹುದು.

Mr. SPEAKER.—I will consider it. There are other questions and if there is time, I will consider.

Submission of Report by the Special Enquiry Officer appointed for G. M. P. Society, Ltd., Shigli.

*Q.—309. Sri SIDDAIAH KASIMATH (Shirahatti).—

Will the Government be pleased to state :—

(*a*) whether it is a fact that a Special Enquiry Officer was appointed for the G. M. P. Society, Limited, Shigli, in Shirahatti Taluk in the year 1955;

(*b*) if so, when did he submit his report;

(*c*) the action they have taken on the report ?

A.—Sri KONDAJJI BASAPPA (Deputy Minister for Co-operation).—

(*a*) Yes.

(*b*) On 15th March 1956.

(*c*) The case is under investigation, by the Examining Officer appointed for this purpose.

ಶ್ರೀ ಸಿದ್ಧಯ್ಯ ಕಾಶೀಮಠ.—ಈ ಶಿಗ್ಲಿಯಲ್ಲಿ ದುರುಪಯೋಗವಾಗಿರತಕ್ಕ ಹಣವೆಷ್ಟು ?

† Sri KONDAJJI BASAPPA.—Rs. 33,000.

ಶ್ರೀ ಸಿದ್ಧಯ್ಯ ಕಾಶೀಮಠ.—(ಸಿ)ಗೆ ಉತ್ತರವಾಗಿ ಪರಿಶೀಲಿಸುತ್ತಿದ್ದಾರೆಂದು ತಿಳಿಸಲಾಗಿದೆ. 1956ರಿಂದ — ಆರು ವರ್ಷ ಕಳೆದರೂ ಆ ಪರಿಶೀಲನೆ ಇನ್ನೂ ನಡೆಯುತ್ತಿದೆಯೇ ?

Sri KONDAJJI BASAPPA.—The enquiry is completed. The person has retired on 21-1-63. After the receipt of that report, the District Registrar of Belgaum, under whose jurisdiction it is, has passed an order for the recovery of the amount from the person concerned.

ಶ್ರೀ ಸಿದ್ಧಯ್ಯ ಕಾಶೀಮಠ.—ಈಗಾಗಲೇ ಈ ಕೇಸಿನ ಇಕ್ವೆಸ್ಟಿಗೇಷನ್ನನ್ನು ಪೋಲೀಸಿನವರಿಂದ ಈ ಸೊಸೈಟಿ ಹಿಂದಕ್ಕೆ ತೆಗೆದುಕೊಂಡಿದೆ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ಕೇಸನ್ನು ವಿತಡ್ರಾ ಮಾಡಿಲ್ಲ. Immediately the auditor's report was received, along with the auditor's report a complaint was sent and the D.S.P. of Dharwar sent it to the concerned Police Inspector. They have sent a F. I. R. to the Court. After some time they have submitted a summary report. Accordingly, the Magistrate has accepted it.

ಶ್ರೀ ಸಿದ್ಧಯ್ಯ ಕಾಶೀಮಠ.—1925ನೇ ಇಸವಿ ಮುಂಬೈ ರಾಜ್ಯದ ಕೋ-ಆಪರೇಟಿವ್ ಸೊಸೈಟಿಗಳ ಕಾಯಿದೆ ಪ್ರಕಾರ ಈ ಸಂಸ್ಥೆಗೆ ಗೌರವ ಕಾರ್ಯದರ್ಶಿಗಳ ನೇಮಕದ ಅವಶ್ಯಕತೆ ಇದ್ದಿಲ್ಲ. ಆದಾಗ್ಯೂ ಅವರಿಗೆ ಗೌರವ ವೇತನವನ್ನು ಕೊಟ್ಟಿದ್ದಾರೆ. ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ವಿಚಾರವನ್ನು ಆ ರಿಪೋರ್ಟಿನಲ್ಲಿ ಅಬ್‌ಸರ್ವ್ ಮಾಡಿದ್ದಾರೆ.

ಶ್ರೀ ಅಂಗಡಿ ಚೆನ್ನಬಸಪ್ಪ.—ಈ ಸೊಸೈಟಿ ವ್ಯವಹಾರವನ್ನು ಹಾಳುಮಾಡಿ ದುರವಸ್ಥೆಗೆ ತಂದಿಂಥ ಅಧ್ಯಕ್ಷರನ್ನೂ ಮತ್ತು ಸೆಕ್ರೆಟರಿಗಳನ್ನೂ ಒಂದು ಬ್ಲಾಕ್ ಲಿಸ್ಟಿಗೆ ಸೇರಿಸಿ ಅವರು ಇನ್ನು ಎಲ್ಲಿಯೂ ಈ ಅಧಿಕಾರ ಮಾಡದಂತೆ ತಡೆಗಟ್ಟುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರ ಕಾಲದಲ್ಲೇ ಈ 33 ಸಾವಿರ ರೂ.ಗಳ ದುರುಪಯೋಗವಾಗಿದೆ ಎಂತ ತಾವು ಅರ್ಥಮಾಡಬಾರದು. ಈ ಹಣದ ದುರುಪಯೋಗ ಕೆಲವು ವರ್ಷಗಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಕೆಲವು ವ್ಯವಸಾಯಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು ಮಾರಾಟ ಮಾಡತಕ್ಕ ಅಂಗಡಿಯನ್ನು ನಡೆಸರಾಗುತ್ತಿತ್ತು. ಆ ಬಗ್ಗೆ 14 ಸಾವಿರ ರೂ.ಗಳ ನಷ್ಟ ಉಂಟಾಗಿವೆ. ಈ ಹಣವೂ ಆ 33 ಸಾವಿರದಲ್ಲಿ ಸೇರಿಕೊಂಡಿದೆ. ಇನ್ನು ಎರಡನೆಯದಾಗಿ ಕೆಲವು ಷೇರುಗಳ ಹಣವನ್ನು ಕರೆಕ್ಟ್ ಮಾಡಿದ್ದಾರೆ. ಕೆಲವು ಭಾಗ ಸೊಸೈಟಿಗೆ ಜಮಾ ಆಗಿದೆ. ಕೆಲವು ಭಾಗ ಆಗಿಲ್ಲ. ಆ ಎಕ್ಸ್-ಡಿಫಾಲ್ಟರುಗಳಿಂದ ಮೊನ್ನೆ ತಾನೆ 9996 ರೂ.ಗಳು ವಸೂರಾಗಿದೆ. ಹೀಗೆ ಈ 33 ಸಾವಿರದಲ್ಲಿ ನಾನಾ ತರಹ ಹಣ ಸೇರಿಕೊಂಡಿದೆ.

ಶ್ರೀ ಅಂಗಡಿ ಚನ್ನಬಸಪ್ಪ.—ಅಂದ ಮೇಲೆ ಈ ಸೊಸೈಟಿಯ ರೆಕ್ಕಪತ್ರಗಳು ಕಾಲಕಾಲಕ್ಕೆ ಸರಿಯಾಗಿ ಆಡಿಟ್ ಆಗಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—Recently the file has been called for and we are examining the report submitted by the latest examining officer. We are shortly taking some steps in this matter.

ಶ್ರೀ ಅಂಗಡಿ ಚನ್ನಬಸಪ್ಪ.—1955 ರಿಂದ ಆಡಿಟ್ ಆಗಿಲ್ಲವೆಂತ ಇದರಿಂದಲೇ ವೇದ್ಯವಾಗುತ್ತಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಆಡಿಟ್ ಆಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಅವರು ತಾಲ್ಲೂಕ್ ಕಮಿಟಿ ಅಧ್ಯಕ್ಷರೂ, ಸ್ಪೇಟ್ ಹ್ಯಾಂಡ್ ಲೂಂ ಬೋರ್ಡ್ ಡೈರೆಕ್ಟರು - ಡಿಸ್ಟ್ರಿಕ್ಟ್ ಇಂಡಸ್ಟ್ರೀಯಲ್ ಬ್ಯಾಂಕಿನ ಡೈರೆಕ್ಟರು ಆಗಿರುವುದರಿಂದ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಈ ಕೇಸನ್ನು ವಾಪಸ್ಸು ತೆಗೆದುಕೊಂಡರು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ನಾನೇ ಈ ಹ್ಯಾಂಡ್ ಲೂಂ ಅಡ್ವೈಜರಿ ಬೋರ್ಡಿನ ಛೇರ್ಮನ್ ಅವರು ಈಗ ಡೈರೆಕ್ಟರಾಗಿಲ್ಲ.

ಹಿಂದೇನಾದರೂ ಇದ್ದರೋ ಏನೋ ಅದು ನನಗೆ ಗೊತ್ತಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈಗಿರತಕ್ಕ ಆಡಳಿತ ವರ್ಗದವರು ಇಂಥ ತಪ್ಪು ಮಾಡಿರುವುದರಿಂದ ಈ ಸಂಪುಟದವರು ರಾಜ್ಯದಲ್ಲಿ ಇನ್ನೆಲ್ಲೂ ಆಡಳಿತ ನಡೆಸದಂತೆ ಇವರನ್ನು ಒಂದು ಬ್ಲಾಕ್ ಲಿಸ್ಟಿಗೆ ಸೇರಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಯೇ ?

Sri KONDAJJI BASAPPA.—As I said already, we are examining this case and we are taking very strong steps in this matter.

Sri C. S. HULKOTI.—Why was there delay to appoint the Examining Officer ?

Sri KONDAJJI BASAPPA.—He was appointed in 1956 alone.

ಶ್ರೀ ಬಿ. ಚನ್ನಬೈರೇಗೌಡ.—ಈ 33 ಸಾವಿರ ರೂ.ಗಳನ್ನು ದುರುಪಯೋಗಪಡಿಸಿರತಕ್ಕ ಆ ಕಾರ್ಯದರ್ಶಿಗಳು ಶಿರಹಟ್ಟಿ ತಾಲ್ಲೂಕ್ ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದಾರಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಹೀಗೆ ಈ ಸೊಸೈಟಿಯಲ್ಲಿ ಅನ್ಯಾಯ ನಡೆಯುತ್ತಿದೆ ಎಂತ ಆ ಸಂಬಂಧಪಟ್ಟ 5 ಹಳ್ಳಿ ಜನಗಳೇನಾದರೂ ಸರ್ಕಾರಕ್ಕೆ ದೂರು ಇತ್ತಿದ್ದಾರೆಯೇ ?

Sri KONDAJJI BASAPPA.—I am not aware of that, Sir.

Sri C. S. HULKOTI.—Is it possible to recover the amount of 9,000 and odd ?

Sri KONDAJJI BASAPPA.—That has to be examined.

ಶ್ರೀ ಬಿ. ಎಲ್. ಗೌಡ.—ಈ ಹಣ ದುರುಪಯೋಗ ಮಾಡಿರತಕ್ಕ ಸೆಕ್ರೆಟರಿಗಳಿನ್ನೂ ಅಧಿಕಾರದಲ್ಲಿದ್ದಾರೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗಿಲ್ಲ.

———